# ಸೂಜಿ-ದಾರದ ಸರದಾರ








ಬಣ್ಣ ಬಣ್ಣ ದಾರದಿಂದ ಬಟ್ಟೆಯ ಮೇಲೆ ಎಂಬ್ರಾಯಿಡರಿ ಮಾಡುವುದು ಸುಲಭದ ಕೆಲಸವಲ್ಲ. ಈ ನಾಜೂಕಿನ ಕಲೆ ಕೆಲವರಿಗೆ ಮಾತ್ರ ಕರಗತವಾಗುತ್ತದೆ. ಫಿಲಿಡೆಲ್ಫಿಯಾದ ಡೇನಿಯಲ್ ಕಾರ್ನ್ ರುಮ್ಫ್ ಕೈಚಳಕದಲ್ಲಿ ರೂಪುಗೊಂಡ ವ್ಯಕ್ತಿ ಚಿತ್ರಗಳ ಎಂಬ್ರಾಯಿಡರಿಗಳನ್ನು ನೋಡಿ. ಥೇಟ್ ಕುಂಚದಿಂದ ಬಣ್ಣದಲ್ಲಿ ಅದ್ದಿ ಮಾಡಿರುವ ಪೇಂಟಿಂಗ್ಸ್ ಅಥವಾ ಫೋಟೋ ಇರಬಹುದೇನೋ ಎಂಬ ಭ್ರಮೆಯನ್ನು ಉಂಟು ಮಾಡುವ ಇವುಗಳನ್ನು ನೋಡಿದವರೆಲ್ಲಾ ಬೆರಗಾಗುವುದು ಖಂಡಿತ.

ಮತ್ತೊಂದು ಆಶ್ಚರ್ಯದ ಸಂಗತಿಯೆಂದರೆ, ಈ ಎಂಬ್ರಾಯಿಡರಿಗಳ ಗಾತ್ರ. ಪುಟ್ಟ ಪುಟ್ಟ ಸೈಜಿನಲ್ಲಿಯೇ ಎಲ್ಲಾ ಸೂಕ್ಷ್ಮತೆಯನ್ನೂ ಸವಿಸ್ತಾರವಾಗಿ ಅಭಿವ್ಯಕ್ತಗೊಳಿಸುವ ಇವುಗಳನ್ನು, ದೊಡ್ಡ ಬ್ಯಾಕ್‌ಗ್ರೌಂಡ್‌ನಲ್ಲಿ ತೋರಿಸಲಾಗಿದೆ. ಸಾವಿರಾರು ಜನರಿಂದ ಶಹಬ್ಬಾಸ್ ಎನ್ನಿಸಿಕೊಂಡ ಡೇನಿಯಲ್ ಕಾರ್ನ್ ರುಮ್ಫ್‌ನನ್ನು 'ಸೂಜಿ ದಾರದ ಸರದಾರ' ಎನ್ನಬಹುದು.

■ ವಿದ್ಯಾ ಹಾಲಭಾವಿ